ದಿನಾಂಕಃ 11-08-2022 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀಮತಿ ಕೆ ಎಂ ಕೆ ವಕೀಲರಿಂದಃ</u>

18. ನನ್ನ ಗಂಡ ಕಾರನ್ನು ಚಾಲನೆ ಮಾಡಿಕೊಂಡು ಬೇರೆ ಬೇರೆ ಊರುಗಳಿಗೆ ಹೋಗುತ್ತಿದ್ದನು ಎಂದರೆ ಸರಿ. ಕಡೂರು, ಬೀರೂರು ಮತ್ತು ತರೀಕೆರೆಗಳಲ್ಲಿ ನಿಮ್ಮ ಪರಿಚಯದವರು ಇದ್ದಾರೆ ಎಂದರೆ ಸಾಕ್ಷಿ ಕಡೂರಿನಲ್ಲಿ ಪರಿಚಯದವರು ಇದ್ದಾರೆ ಆದರೆ ಬೀರೂರು ಮತ್ತು ತರೀಕೆರೆಗಳಲ್ಲಿ ಕೇವಲ ಸಂಬಂಧಿಕರು

ಇದ್ದಾರೆ ಎನ್ನುತ್ತಾರೆ. ಕಡೂರಿನಲ್ಲಿ ನಿಮ್ಮ ಸ್ನೇಹಿತರುಗಳು ಇದ್ದಾರೆ ಎಂದರೆ ಸರಿ. ಕಡೂರಿನಲ್ಲಿ ನಿಮ್ಮ ಗಂಡನಿಗೆ ಆಗದ ವ್ಯಕ್ತಿಗಳು ಸಹ ಇದ್ದಾರೆ ಎಂದರೆ ಸರಿಯಲ್ಲ. ಪ್ರತೀ ದಿನ ನಿಮ್ಮ ಗಂಡ ಎಷ್ಟು ಬಾಡಿಗೆ ಹಣವನ್ನು ಸಂಪಾದಿಸುತ್ತಿದ್ದರು ಎಂದರೆ ಸಾಕ್ಷಿ ಒಂದೊಂದು ದಿನ ಒಂದೊಂದು ತರಹ ಸಂಪಾದನೆ ಇರುತ್ತಿತ್ತು ಎನ್ನುತ್ತಾರೆ. ಹತ್ತಾರು ಜನರು ನಿಮ್ಮ ಗಂಡನ ಆಟೋ ಬಾಡಿಗೆಗೆ ಪ್ರತಿ ದಿನ ಬಂದು ಹೋಗುತ್ತಿದ್ದರು ಎಂದರೆ ಸರಿ.

19. ನಿಮ್ಮ ಗಂಡನ ಮೊಬೈಲ್ ನ್ನು ತೆಗೆದುಕೊಂಡು ಆರೋಪಿತರು ಕರೆ ಮಾಡಿರಬಹುದು ಎಂದರೆ ಸರಿ. ಆರೋಪಿತರು ನಿಮ್ಮ ಗಂಡನ ಮೊಬೈಲ್ ನಿಂದ ಆರೋಪಿಯ ಚಿಕ್ಕಪ್ಪನಾದ ಚಾಸಾ.25 ರವರಿಗೆ ಕರೆ ಮಾಡಿದ್ದರು ಎಂದರೆ ಸಾಕ್ಷಿ ಆ ಬಗ್ಗೆ ಪೊಲೀಸರಿಂದ ನನಗೆ ಗೊತ್ತಾಯಿತು ಎನ್ನುತ್ತಾರೆ. ನಿಮ್ಮ ಗಂಡನಿಗೆ ಮಧ್ಯಪಾನವಿತ್ತೇ ಎಂದರೆ ಸಾಕ್ಷಿ ಸ್ವಲ್ಪ ಇತ್ತು ಎನ್ನುತ್ತಾರೆ.

20. ಘಟನೆಯ ದಿನ ರಾತ್ರಿ 10.00 ಗಂಟೆಗೆ ನನ್ನ ಗಂಡ ಕೊನೆಯ ಬಾರಿ ನನ್ನೊಂದಿಗೆ ಫೋನಿನಲ್ಲಿ ಮಾತನಾಡಿದ್ದರು. ಆ ಸಮಯದಲ್ಲಿ ಅವರು ಕೇವಲ ಬಾಡಿಗೆಗೆ ಹೋಗುತ್ತಿರುವುದಾಗಿ ತಿಳಿಸಿದ್ದರು ಆದರೆ ಆಟೋದಲ್ಲಿ

ಬಾಡಿಗೆಗೆ ಹೋಗುತ್ತಿದ್ದ ವ್ಯಕ್ತಿಗಳ ಬಗ್ಗೆ ತಿಳಿಸಿರಲಿಲ್ಲ. ಘಟನೆಯ ಬಗ್ಗೆ ನಾನು ಮಿಸ್ಸಿಂಗ್ ಕಂಪ್ಲೇಂಟ್ ನ್ನು ಕೊಡಲು ಹೋದಾಗ ನನಗೆ ಗೊತ್ತಾಯಿತು. ನಾನು ಮಿಸ್ಸಿಂಗ್ ಕಂಪ್ಲೇಂಟ್ ನ್ನು ಕೊಡಲು ಹೋದಾಗ ಪೊಲೀಸರು ಅನಾಥ ಶವ ದೊರಕಿದೆ ನೋಡಿ ಎಂದು ಫೋಟೋ ತೋರಿಸಿದರು.

21. ಘಟನೆಯ ಪೂರ್ವದಲ್ಲಿ ನನಗೆ ಆರೋಪಿತರ ಪರಿಚಯವಿರಲಿಲ್ಲ. ಅವರ ಬಗ್ಗೆ ಪೊಲೀಸರಿಂದ ತಿಳಿಯಿತು. ದಿನಾಂಕ 16.07.2021 ರಂದು ಆರೋಪಿತರು ರಾತ್ರಿ 8.00 ಗಂಟೆ ಸಮಯಕ್ಕೆ ನಂಜಪ್ಪಹಳ್ಳಿ ಗ್ರಾಮದಲ್ಲಿರುವ ಅವರ ಚಿಕ್ಕಪ್ಪನ ಮನೆಗೆ ಹೋಗಿ ಸೇರಿದ್ದರು ಎಂದರೆ ಸರಿಯಲ್ಲ. ನೀವು ನಿಮ್ಮ ಗಂಡನ ಬಗ್ಗೆ ವಿಚಾರಿಸಿದ ಸಂಬಂಧಿಕರು, ಸ್ನೇಹಿತರು ಮತ್ತು ಪರಿಚಯಸ್ಥರ ಹೆಸರುಗಳನ್ನು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಸುಮಾರು ಜನರನ್ನು ವಿಚಾರಿಸಿದ್ದೇನೆ ಎನ್ನುತ್ತಾರೆ. ನಾನು ಮತ್ತು ನನ್ನ ಗಂಡ ಅನ್ಯೂನ್ಯವಾಗಿದ್ದೆವು.

22. ಮು.ಮಾ.1 ರಿಂದ 9 ನಿಮ್ಮ ಗಂಡನಿಗೆ ಸಂಬಂಧಿಸಿದ್ದವಲ್ಲ ಎಂದರೆ ಸರಿಯಲ್ಲ. ಪೊಲೀಸರು ಹೇಳಿ ತೋರಿಸಿದ್ದರಿಂದ ನಾನು ಅವುಗಳನ್ನು ನೋಡಿ ಗುರುತಿಸಿದ್ದೇನೆ

ಎಂದರೆ ಸರಿಯಲ್ಲ. ನನ್ನ ಗಂಡ ಆಟೋಗೆ ಹೋಗುವ ಸಮಯದಲ್ಲಿ ಎಕ್ಸ್ಟ್ರಾ ಬಟ್ಟೆಯನ್ನು ತೆಗೆದುಕೊಂಡು ಹೋಗುತ್ತಿರಲಿಲ್ಲ. ನಿಪಿ.2 ರಿಂದ 4 ಫೋಟೋಗಳಿಗೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

23. ಕಡೂರಿನಿಂದ ನಂಜಪ್ಪನಹಳ್ಳಿ ಗ್ರಾಮಕ್ಕೆ ಹೋಗಲು ಹೇಮಗಿರಿ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ರಸ್ತೆಯನ್ನು ಹೊರತುಪಡಿಸಿ ಬೇರೆ ರಸ್ತೆ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಕಡೂರಿನಿಂದ ನಂಜಪ್ಪನಹಳ್ಳಿ ಗ್ರಾಮಕ್ಕೆ ಹೋಗಲು ಎಷ್ಟು ಸಮಯವಾಗುತ್ತದೆ ಎಂದು ನನಗೆ ಗೊತ್ತಿಲ್ಲ. ಘಟನೆಯ ದಿನ ಮಧ್ಯಾಹ್ನ 2.30 ಗಂಟೆಗೆ ನನ್ನ ಗಂಡ ಎಂದಿನಂತೆ ಮನೆಯಿಂದ ಆಟೋ ಬಾಡಿಗೆಗೆ ಹೋದರು. ಆ ದಿನ ಮನೆಯಿಂದ ಹೋದ ಬಳಿಕ ನನ್ನ ಗಂಡ ನನ್ನೊಂದಿಗೆ 2-3 ಬಾರಿ ಫೋನಿನಲ್ಲಿ ಮಾತನಾಡಿದ್ದರು.

24. ನಿಮ್ಮ ಗಂಡನ ಬಳಿ ಇದ್ದ ರೂ.1,600/- ಹಣಕ್ಕೂ ಆರೋಪಿಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಿಮ್ಮ ಗಂಡನ ಆಟೋದಲ್ಲಿ ಕೇವಲ ಪ್ರಯಾಣಿಕರು ಪ್ರಯಾಣಿಸುತ್ತಿದ್ದರು ಲಗೇಜುಗಳನ್ನು ಹಾಕುತ್ತಿರಲಿಲ್ಲ ಎಂದರೆ ಸಾಕ್ಷಿ ಹೆಚ್ಚು ಲಗೇಜು ಇದ್ದ ಸಮಯದಲ್ಲಿ ಅವುಗಳನ್ನು ಆಟೋ ಮೇಲೆ ಹಾಕಿ ಕಟ್ಟುತ್ತಿದ್ದರು ಎನ್ನುತ್ತಾರೆ. 2 ನೇ ಆರೋಪಿ

ಅಂಗವಿಕಲ ಎಂದರೆ ಸಾಕ್ಷಿ ಆ ಬಗ್ಗೆ ಪೊಲೀಸರಿಂದ ತಿಳಿಯಿತು ಎನ್ನುತ್ತಾರೆ. ಆರೋಪಿತರು ಚಿಕ್ಕಮಗಳೂರಿನ ಜೀವನ ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ಆ ಬಗ್ಗೆ ಪೊಲೀಸರಿಂದ ತಿಳಿಯಿತು ಎನ್ನುತ್ತಾರೆ.

25. ಆರೋಪಿತರು ನಿಮ್ಮ ಗಂಡನ ಆಟೋದಲ್ಲಿ ಬಾಡಿಗೆಗೆ ಹೋಗಿದ್ದನ್ನು ಹೊರತುಪಡಿಸಿ ಬೇರೆ ರೀತಿಯ ಸಂಬಂಧ ಇರಲಿಲ್ಲ ಎಂದರೆ ಸರಿ. ಯಾರೇ ಬಂದು ಕರೆದರು ನನ್ನ ಗಂಡ ಬಾಡಿಗೆಗೆ ಹೋಗುತ್ತಿದ್ದರು ಎಂದರೆ ಸರಿ. ಘಟನೆಯ ದಿನ ಆರೋಪಿತರು ನಂಜಪ್ಪನಹಳ್ಳಿಗೆ ರಾತ್ರಿ 8.00 ಗಂಟೆ ಹೋಗಿ ಇಳಿದ ಬಳಿಕ ನಿಮ್ಮ ಗಂಡ ವಾಪಾಸ್ಸು ಹೋಗಬೇಕಾದರೆ ಘಟನೆ ನಡೆದಿರಬಹುದು ಎಂದರೆ ಸರಿಯಲ್ಲ.

26. ಮು.ಮಾ.9 ಎಂದು ಗುರುತಿಸಲ್ಪಟ್ಟಿರುವ ಹಗ್ಗ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸಾಕ್ಷಿ ಅದನ್ನು ನನ್ನ ಗಂಡ ತನ್ನ ಆಟೋದಲ್ಲಿ ಇಟ್ಟುಕೊಂಡಿದ್ದರು ಎನ್ನುತ್ತಾರೆ.

(ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಸಾಕ್ಷಿಯ ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ದಿನಾಂಕಃ 11-08-2022 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀಮತಿ ಕೆ ಎಂ ಕೆ ವಕೀಲರಿಂದಃ

27. ದೂರನ್ನು ನನ್ನ ಅಕ್ಕನ ಮಗಳು ಬರೆದುಕೊಟ್ಟಿದ್ದಾಳೆ. ಮು.ಮಾ.1 ರಿಂದ 12 ನ್ನು ಪೊಲೀಸರು ಹೇಳಿದ್ದರಿಂದ ಗುರುತಿಸಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಹೇಳಿದ್ದರಿಂದ ನನಗೆ ಘಟನೆಯ ಬಗ್ಗೆ ತಿಳಿಯಿತು. ಆರೋಪಿತರು ನಿಮ್ಮ ಗಂಡನನ್ನು ಕೊಲೆ ಮಾಡದೇ ಇದ್ದರೂ ಸಹ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ